ಈ ಲೇಖನದ ವಿಷಯಾನುಕ್ರಮಣಿಕೆ


ಯೋಧರಿಗಾಗಿ ಪ್ರಾರ್ಥನೆ 2

ನಾಗರೀಕರ ಕರ್ತವ್ಯ 9

ಯುದ್ಧದ ಎಲ್ಲ ವಿವರವೂ ಬೇಕು ಎಂಬ ಆಗ್ರಹ ಬೇಡ9

ಪ್ರತಿಯೊಂದು ವಿಷಯದ ಬಗ್ಗೆ ಕಾಮೆಂಟು ಬೇಡ 10

ಸಿಕ್ಕ ವಿಷಯಗಳನ್ನೆಲ್ಲ ಶೇರ್ ಮಾಡಬೇಡಿ 11

ಯೋಧರಿಗೆ ಸಹಾಯ ಮಾಡುವ ಸರಿಯಾದ ಕ್ರಮ 15

ಸಣ್ಣಸಣ್ಣ ವಿಷಯಕ್ಕೆ ಹಿಗ್ಗಬೇಡಿ, ಕುಗ್ಗಲೂ ಬೇಡಿ. 16

## ಯೋಧರಿಗಾಗಿ ಪ್ರಾರ್ಥನೆ

ಅದೊಂದು ಅದ್ಭುತವಾದ ಶ್ಲೋಕವಿದೆ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಶ್ಲೋಕವೇ. ವ್ಯಾಕರಣದ ದೃಷ್ಟಿಯಿಂದ ತುಂಬ ಮಹತ್ತ್ವ ಪಡೆದಿರುವ ಶ್ಲೋಕ. ಅರ್ಥದ ದೃಷ್ಟಿಯಿಂದಂತೂ ಸಾಟಿಯಿಲ್ಲದ ಶ್ಲೋಕ.

ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಯಿಂದ ಆರಂಭಿಸಿ, ಜೀವನದ ಪರೀಕ್ಷೆಯನ್ನು ಎದುರಿಸುವ ವ್ಯಕ್ತಿಯಲ್ಲಿಯೂ,  ಗಡಿಯನ್ನು ಕಾಯುವ ಯೋಧನಲ್ಲಿಯೂ ಇರಲೇ ಬೇಕಾದ ಎಂಟು ಗುಣಗಳನ್ನು ತಿಳಿಸುವ, ಅವನ್ನು  ನಮಗೆ ದಯಪಾಲಿಸುವ ಹನುಮನನ್ನು ಪ್ರಾರ್ಥಿಸುವ ಸುಂದರ, ಪುಟ್ಟ ಶ್ಲೋಕ.

ಅದನ್ನು ನಮಗಾಗಿ ಪಠಿಸೋಣ. ನಮ್ಮ ಮಕ್ಕಳಿಗಾಗಿ ಪಠಿಸೋಣ. ನಮ್ಮನ್ನು ಕಾಯುತ್ತಿರುವ ಯೋಧರಿಗಾಗಿ ವಿಶೇಷವಾಗಿ ಪಠಿಸೋಣ.

**ಬುದ್ಧಿರ್ಬಲಂ ಯಶೋ ಧೈರ್ಯಂ**
**ನಿರ್ಭಯತ್ವಮರೋಗತಾ।**
**ಅಜಾಡ್ಯಂ ವಾಕ್ಪಟುತ್ವಂ ಚ**
**ಹನೂಮತ್-ಸ್ಮರಣಾದ್ ಭವೇತ್ ।**

ಓ ರಾಮದೂತ ಹನುಮ, ಮಹತ್ತರ ಪರಾಕ್ರಮದ, ಅದ್ಭುತ ಬುದ್ಧಿವಂತಿಕೆಯ, ನಿರ್ಭೀತ ಸಾಹಸಿ ನೀನು.

ಈ ದಿವಸ ನಿನ್ನದೇ ನೆಲವಾದ ಭರತ ಭೂಮಿಯ ಯೋಧರು ಇಡಿಯ ರಾಷ್ಟ್ರದ ರಕ್ಷಣೆಗಾಗಿ ಗಡಿಯಲ್ಲಿ ಟೊಂಕ ಕಟ್ಟಿ ನಿಂತಿದ್ದಾರೆ. ಯುದ್ಧದ ವಾತಾವರಣ ಅರಂಭವಾಗಿದೆ. ಓ ಪ್ರಾಣಪುತ್ರ, ಅವರಿಗಾಗಿ ನಿನ್ನಲ್ಲಿ ಪ್ರಾರ್ಥನೆ ಮಾಡುತ್ತೇವೆ, ನಮ್ಮ ಪ್ರಾರ್ಥನೆಯನ್ನು ಮನ್ನಿಸು.

ಸಾಗರವನ್ನು ದಾಟಿ, ರಾಕ್ಷಸರನ್ನು ಕೊಂದು, ಸೀತೆಯನ್ನು ಕಂಡು, ರಾವಣನಿಗೆ ಎಚ್ಚರಿಕೆಯನ್ನು ಕೊಟ್ಟು ಬಂದು, ನಂತರ ರಾಮನ ಜೊತೆಯಲ್ಲಿ ಹೋಗಿ ಶತ್ರುಗಳ ಚಂಡಾಡಿದ ಓ ಹನುಮ, ನಿನ್ನ ಶಕ್ತಿಯನ್ನು ನಮ್ಮ ಯೋಧರಿಗೆ ನೀಡು.

**ಬುದ್ಧಿಃ —** ಶತ್ರುಗಳು ಏನು ಮಾಡಲಿದ್ದಾರೆ ಎಂದು ಗ್ರಹಿಸುವ ಸಾಮರ್ಥ್ಯ, ಪ್ರತೀಕಾರವಾಗಿ ನಾವೇನು ಮಾಡಬೇಕು ಎಂಬ ತಿಳುವಳಿಕೆ, ಹಿರಿಯ ಅಧಿಕಾರಿಗಳು ಹೇಳಿದ ಪ್ರತಿಯೊಂದನ್ನೂ ನೆನಪಿಟ್ಟುಕೊಳ್ಳುವ ಸಾಮರ್ಥ್ಯ, ಇದ್ದಕ್ಕಿದ್ದ ಹಾಗೆ ತೋರುವ ಪರಿಸ್ಥಿತಿಯನ್ನು ಎದುರಿಸಬೇಕಾದ ಸಮಯಪ್ರಜ್ಞೆ  ಮುಂತಾದ ಎಲ್ಲ ರೀತಿಯ ಬೌದ್ಧಿಕ ಸಾಮರ್ಥ್ಯಗಳು ನಮ್ಮ ಯೋಧರಿಗೆ ಬರಲಿ, ಹನುಮ.

**ಬಲಂ —** ಶತ್ರುವನ್ನು ಕೊಂದು ಹಾಕುವ ಅದ್ಭುತವಾದ ಶಕ್ತಿ,  ಮೈಮೇಲೆ ಹತ್ತಾರು ಕಿಲೋ ಭಾರದ ಬಂದೂಕು, ಯುದ್ಧ ಸಾಮಗ್ರಿಗಳನ್ನು ಹೊತ್ತು ಹೋಗುವ ಶಕ್ತಿ, ಅಸಾಧ್ಯವಾದ ಪರಿಸ್ಥಿತಿಯಲ್ಲಿಯೂ ಶತ್ರುವನ್ನು ಸದೆಬಡಿಯುವ ಶಕ್ತಿ, ಟ್ಯಾಂಕರು ಹಡಗು, ವಿಮಾನ ಇವುಗಳನ್ನು ನಡೆಸಿ ಶತ್ರುಪಾಳೆಯದ ಹುಟ್ಟಡಿಗಿಸುವ ಶಕ್ತಿ ನಮ್ಮ ಯೋಧರಿಗೆ ಸಹಜವಾಗಿದೆ ಹನುಮ, ಅದನ್ನು ನೂರ್ಮಡಿ ಮಾಡು. ಸದಾಕಾಲ ಉಳಿಯುವಂತೆ ಮಾಡು.

ಮೂಳೆಯನ್ನೂ ಕರಗಿಸುವ ಛಳಿಯಲ್ಲಿಯೂ, ಮಾಂಸವನ್ನೂ ಒಣಗಿಸಿಬಿಡುವ ಬಿರು ಬಿಸಿಲಿನಲ್ಲಿಯೂ, ಇಡಿಯ ಪ್ರಕೃತಿಯನ್ನೇ ಅಲ್ಲಾಡಿಸುವ ಬಿರುಗಾಳಿಯಾಗಿಲ್ಲಿಯೂ, ಏನನ್ನೂ ಕಾಣದಂತೆ ಮಾಡುವ ಕುಂಭದ್ರೋಣದ ಮಳೆಯಲ್ಲಿಯೂ ದೃಢವಾಗಿ ಕಾಲೂರಿ ನಿಂತು ಕಾದುವ ಶಕ್ತಿಯನ್ನು ನಮ್ಮ ಯೋಧರಿಗೆ ನೀಡು ಹನುಮ.

**ಯಶಃ —** ಭಾರತೀಯ ನಾಗರೀಕರಿಂದ, ವಿಶ್ವದ ಸಜ್ಜನ ನಾಗರೀಕರಿಂದ ಯುದ್ದಕ್ಕೂ ಮೊದಲು, ಯುದ್ಧದ ನಂತರವೂ, ಶಾಂತಿಯ ಸಂದರ್ಭದಲ್ಲಿಯೂ ಎಲ್ಲ ರೀತಿಯ ಪ್ರೋತ್ಸಾಹ ಪ್ರಶಂಸೆಗಳಿಗೆ ನಮ್ಮ ಭಾರತೀಯ ಸೇನೆ ಪಾತ್ರವಾಗಲಿ, ಹನುಮ.

**ಧೈರ್ಯಂ —** ಇದನ್ನು ಮಾಡಲು ಸಾಧ್ಯವಿಲ್ಲ ಎಂದು ಇಡಿಯ ಪ್ರಪಂಚ ಕೈಚಲ್ಲಿ ಕುಳಿತರೂ ನಾವು ಮಾಡುತ್ತೇವೆ ಎಂಬ ಧೈರ್ಯ ನಮ್ಮ ವೀರಯೋಧರಲ್ಲಿದೆ, ಅದನ್ನು ನೂರ್ಮಡಿ ಮಾಡು ಹನುಮ, ಸುದೃಢವನ್ನಾಗಿ ಮಾಡು.

**ನಿರ್ಭಯತ್ವಂ —** ಶತ್ರುಗಳು ಮೈಮೇಲೆ ಹಾರಿ ಬರುತ್ತಿದ್ದರೂ, ಮುಂದಿನ ಕ್ಷಣಕ್ಕೆ ಸಾವು ಬರಬಹುದು ಎಂದು ಅರಿವಾದರೂ ಎದೆಯಲ್ಲಿ ಭೀತಿಯಿಲ್ಲದೇ ಹೋರಾಡುವ ನಮ್ಮ ವೀರಯೋಧರ ಆ ನಿರ್ಭೀತಿಯನ್ನು ನೂರ್ಮಡಿ ಮಾಡು, ಹನುಮ.

**ಅಜಾಡ್ಯಂ —** ಕಿವಿಯ ತಮಟೆಯೇ ಕಿತ್ತು ಹೋಗುವ ಸದ್ದಿದ್ದರೂ,  ಅಂಗೈಯನ್ನು ಕಣ್ಣ ಮುಂದಿಟ್ಟುಕೊಂಡರೂ ಕಾಣದಷ್ಟು ಧೂಳಿದ್ದರೂ, ಹಿರಿಯ ಅಧಿಕಾರಿಗಳ ಸಂಪರ್ಕ ಕಡಿದು ಹೋದರು, ಅಕಸ್ಮಾತ್ ಶತ್ರುಗಳ ವಶವಾಗಿಬಿಟ್ಟರೂ, ನಮ್ಮ ವೀರಯೋಧರಿಗೆ ಜಾಡ್ಯ ಆವರಿಸದರಲಿ ಹನುಮ, ಅವರ ಬುದ್ಧಿಗೆ ಎಂದಿಗೂ ಎಂದಿಗೂ ಮಂಕು ಬಡಿಯದಿರಲಿ, ಹನುಮ. ಕ್ಷಣಮಾತ್ರದಲ್ಲಿ ಸಂಜೀವನವನ್ನು ತಂದ ನಿನ್ನ ಲವಲವಿಕೆ, ಚಟುವಟಿಕೆ ಅವರಲ್ಲಿ ಬರಲಿ, ಹನುಮ.

**ಅರೋಗತಾ —** ಅದೆಂತಹ ಛಳಿ, ಮಳೆ, ಗಾಳಿ, ಬಿಸಿಲುಗಳೂ ಅವರನ್ನು ಬಾಧಿಸದಿರಲಿ, ಅವರ

ದೇಹ ಉಕ್ಕಿನಂತಾಗಲಿ, ಯಾವ ರೋಗವೂ ಅವರನ್ನು ಕಾಡಿಸದಷ್ಟು, ಆ ನಮ್ಮ ವೀರಯೋಧರಿಗೆ ಆರೋಗ್ಯವನ್ನು ನೀಡು, ಹನುಮ.

**ವಾಕ್ಪಟುತ್ವಂ —** ತಿಳಿಸಬೇಕಾದ್ದನ್ನು ಸ್ಪಷ್ಟವಾಗಿ ತಿಳಿಸುವ ಸಾಮರ್ಥ್ಯ ಅವರಿಗೊದಗಿಬರಲಿ ಹನುಮ. ರಾಷ್ಟ್ರ ನಾಯಕರ ಬಳಿ ಮಾತನಾಡುವಾಗ ಅವರಲ್ಲಿಯೂ  ದೇಶಭಕ್ತಿಯ ಕಿಚ್ಚನ್ನು ಹಚ್ಚಿಸುವಷ್ಟು ಶಕ್ತಿ ಅವರ ಮಾತಿಗಿರಲಿ, ಶತ್ರುಗಳ ಮುಂದೆ ನಿಂತು ಮಾತನಾಡುವಾಗ ಎದೆ ಸೆಟೆಸಿ ವಂದೇ ಮಾತರಮ್ ಎಂದು ಹೇಳಿ ಶತ್ರುಗಳ ಎದೆಯಲ್ಲಿ ನಡುಕ ಹುಟ್ಟಿಸುವ ಶಕ್ತಿ ಅವರ ಧ್ವನಿಗಿರಲಿ ಹನುಮ.

**ಹನೂಮತ್-ಸ್ಮರಣಾದ್ ಭವೇತ್**

ಓ ಹನುಮ, ನೀನು ಬುದ್ಧಿ, ಬಲ, ಯಶಸ್ಸು, ಧೈರ್ಯ, ನಿರ್ಭಯತ್ವ, ಆರೋಗ್ಯ, ಆಜಾಡ್ಯ, ವಾಕ್ಪಟುತ್ವಗಳ ಸಾಕಾರ ಮೂರ್ತಿ.

ನಿನ್ನ ನಾಡಾದ ಈ ಭರತ ಭೂಮಿಯ ಯೋಧರಲ್ಲಿ ಈ ಗುಣಗಳು ಸಹಜವಾಗಿವೆ. ನಿನ್ನ

ಅನುಗ್ರಹದಿಂದ ಅವು ಮತ್ತಷ್ಟು ವೃದ್ಧವಾಗಲಿ. ಸುದೃಢವಾಗಲಿ.

ಶ್ರೀ ಹನುಮತೇ ನಮಃ ಎಂದು ನಿನ್ನ ಮಂತ್ರವನ್ನು ಪಠಿಸುತ್ತೇವೆ. ನಿನ್ನ ಶಕ್ತಿ ನಮ್ಮ ಯೋಧರಲ್ಲಿ ತುಂಬಲಿ. ಕ್ಷಾತ್ರ ತುಂಬಿದ ತೇಜಸ್ಸಿನಿಂದ ಅವರು ದೇಶವನ್ನು ಕಾಯುವಂತಾಗಲಿ.

## ನಾಗರೀಕರ ಕರ್ತವ್ಯ

## ಯುದ್ಧದ ಎಲ್ಲ ವಿವರವೂ ಬೇಕು ಎಂಬ ಆಗ್ರಹ ಬೇಡ

ನಾವು Civilians ಎನ್ನುವದನ್ನು ಯಾವತ್ತಿಗೂ ಮರೆಯೋದು ಬೇಡ. ಯುದ್ಧದ ತಂತ್ರಗಳನ್ನು, ವಿವರಗಳನ್ನು ಯುದ್ಧ ಮಾಡುವ ಯೋಧರಿಗೇನೇ ಹಿರಿಯ ಅಧಿಕಾರಿಗಳು ಪೂರ್ಣವಾಗಿ ತಿಳಿಸುವದಿಲ್ಲ. ಹಿರಿಯ ಅಧಿಕಾರಿಗಳ ಏನು ಆದೇಶವೋ ಅದಕ್ಕೆ ತಕ್ಕಂತೆ ಅವರು ನಡೆದುಕೊಳ್ಳುತ್ತಾರೆ.

ಪರಿಸ್ಥಿತಿ ಹೀಗಿರುವಾಗ ಯುದ್ಧದ ಪ್ರತಿಯೊಂದು ವಿಷಯವೂ ನಮಗೆ ತಿಳಿಯಬೇಕು ಎಂಬ ಆಗ್ರಹ ಸರ್ವಥಾ ಬೇಡ.

ಯುದ್ಧದ ಕುರಿತ ಮೂರೇ ವಿಷಯಗಳನ್ನು ನಾವು ತಿಳಿಯಲು ಅರ್ಹರು. ಯುದ್ಧ ಆರಂಭವಾಯಿತು, ಯುದ್ಧದ ಸಂದರ್ಭದಲ್ಲಿ ನಮಗೆ ಬರುವ ವಿಶೇಷ ಆದೇಶಗಳು, ಯುದ್ಧ ಮುಗಿಯಿತು, ಅದರ ಪರಿಣಾಮವೇನಾಯಿತು. ಇಷ್ಟೇ. ಇದಕ್ಕಿಂತ ಮೀರಿ

ನಾವು ಏನನ್ನೂ ತಿಳಿಯಲಿಕ್ಕೆ ಅನರ್ಹರು. ಕಾರಣ, ನಾವು ನಿರ್ಣಯ ತೆಗೆದುಕೊಳ್ಳುವ ಅಧಿಕಾರದಲ್ಲಿಲ್ಲ.

ನಮ್ಮ ಸುತ್ತಮುತ್ತಲೂ ಏನಾದರೂ ಸಂಶಯಾಸ್ಪದ ವ್ಯಕ್ತಿ, ವಸ್ತು ಕಂಡು ಬಂದರೆ ಸಂಬಂಧಪಟ್ಟವರಿಗೆ ತಿಳಿಸೋಣ.

## ಪ್ರತಿಯೊಂದು ವಿಷಯದ ಬಗ್ಗೆ ಕಾಮೆಂಟು ಬೇಡ

ಯುದ್ಧ ಕ್ರಿಕೆಟ್ಟಾಟವಲ್ಲ. ಯಾವುದೋ ಕ್ರೀಡೆಯಲ್ಲ. ಪ್ರಾಣಗಳೇ ಹೋಗುವ ವಿಷಮಸನ್ನಿವೇಶವದು.

ಯುದ್ಧ ಎಂದ ಬಳಿಕ ಒಂದೇ ರೀತಿಯಲ್ಲಿ ನಡೆಯುವದಿಲ್ಲ. ನಮ್ಮ ಯೋಧರಿಗೂ ಹಾನಿ ಉಂಟಾಗುತ್ತದೆ. ಅದು ಬೀದಿಯಲ್ಲಿನ ಮೈ ಕೈ ಮಿಲಾಯಿಸುವ ಹೊಡೆದಾಟವಲ್ಲ. ಬಂದೂಕು, ಬಾಂಬು ಹಿಡಿದು ಪ್ರಾಣವನ್ನೇ ತೆಗೆಯುವ ಘೋರ ಯುದ್ಧ.

ಸಮಯ ಹೀಗಿರುವಾಗ ಸಿಕ್ಕ ಒಂದು ಅರೆಬರೆ ಮಾಹಿತಿಯನ್ನೇ ಜಗ್ಗಾಡಿ, ನಮ್ಮ ಮೂಗಿನ ನೇರಕ್ಕೆ ಅದನ್ನು ಅರ್ಥೈಸುತ್ತ ಕಾಮೆಂಟು ಮಾಡುವದು ಬೇಡ.

ನಮ್ಮ ಯೋಧರ ಸುರಕ್ಷತೆಗಾಗಿ, ನಮ್ಮ ರಾಷ್ಟ್ರದ ಗೆಲುವಿಗಾಗಿ ಪ್ರಾರ್ಥಿಸೋಣ.

## ಸಿಕ್ಕ ವಿಷಯಗಳನ್ನೆಲ್ಲ ಶೇರ್ ಮಾಡಬೇಡಿ

ಇಂತಹ ಸಂದರ್ಭಗಳಲ್ಲಿ ಮಾಡಲಿಕ್ಕೆ ಬೇರೆ ಕೆಲಸವಿಲ್ಲದ ಕಿಡಿಗೇಡಿಗಳು,  ಯಾವುದೋ ಸಿನಿಮಾದ, ಅಥವಾ ಮತ್ಯಾವುದೋ ಸಂದರ್ಭದಲ್ಲಿ ನಡೆದ ಸನ್ನಿವೇಶದ, ಅಥವಾ ಯಾರೋ ಯಾವಾಗಲೋ ಹೇಳಿದ ಮಾತುಗಳುಳ್ಳ ವಿಡಿಯೋಗಳನ್ನು ತಿರುಚಿ ಹಾಕಿ ಅದನ್ನು ಹರಿಬಿಡುತ್ತಿರುತ್ತಾರೆ. ಹಿಂದೆ ಮುಂದೆ ನೋಡದೆ ಅದನ್ನು ಶೇರ್ ಮಾಡುತ್ತಿದ್ದರೆ, ಅದು ಸುಳ್ಳು ಎಂದು ಸಾಬೀತಾಗಿ ನಮ್ಮ ಮಾನ ನಾವೇ ಹರಾಜು ಹಾಕಿಕೊಂಡಂತಿರುತ್ತದೆ.

ಯಾವ ವಿಷಯಗಳನ್ನು ಕೇಂದ್ರಸರ್ಕಾರವೋ, ಸೈನ್ಯದ ಮುಖ್ಯಸ್ಥರೋ ದೃಢ ಪಡಿಸಿಲ್ಲ ಅಂತಹುದನ್ನು ನಂಬಲೂ ಬೇಡಿ. ಹರಡಲೂ ಬೇಡಿ.

ಎಷ್ಟೋ ಬಾರಿ ಯುದ್ಧದ ತಂತ್ರಗಳು ನಮಗೆ ಅರ್ಥವಾಗುವದೇ ಇಲ್ಲ. ಮೀನನ್ನು ಹಿಡಿಯಲು ಗಾಳ ಹಾಕುವಂತೆ ನಮ್ಮವರನ್ನೇ ಶತ್ರು ಪಾಳೆಯಕ್ಕೆ ಕಳುಹಿಸಿ ಅಲ್ಲಿಂದ ಮತ್ತೇನೋ ತಂತ್ರವನ್ನು ರೂಪಿಸಿರುತ್ತಾರೆ.

ಮನೆಗೆ ಹಣದ ಆವಶ್ಯಕತೆ ಇದೆ ಎಂದಾಗ ಗಂಡಸು ಅದೇನೋ ಸಾಲವೋ, ಮತ್ತೊಂದೋ ಮಾಡಿ ಹಣ ತರುತ್ತಾನೆ. ಭಯ ಬೀಳುತ್ತಾರೆ ಎಂದು ತನ್ನ ಕುಟುಂಬಕ್ಕೇ ಹೇಳುವದಿಲ್ಲ. ಅಂತಹುದರಲ್ಲಿ ಇಡಿಯ ರಾಷ್ಟ್ರದ ಭದ್ರತೆಗೆ ಸಂಬಂಧಪಟ್ಟ ವಿಷಯವನ್ನು ನಮಗೆ ಅವರು ತಿಳಿಸಬೇಕು ಎನ್ನುವದು ತಪ್ಪಲ್ಲವೇ. ಆಲೋಚಿಸಿ.

ಹೀಗಾಗಿ ಅದನ್ನು ತಿಳಿಯುವ ಅರ್ಹತೆ, ಆವಶ್ಯಕತೆ ಎರಡೂ ನಮಗಿಲ್ಲ.

ನಮಗೆ ಬೇಕಾದ್ದು ಭದ್ರತೆ, ನಮ್ಮ ಭಾರತದ ಸಾರ್ವಭೌಮತೆ. ಅದನ್ನು ನೀಡಲು ನಮ್ಮ ವೀರಯೋಧರ ಪಡೆ ಮೈಯೆಲ್ಲ ಕಣ್ಣಾಗಿ ಸಜ್ಜಾಗಿ ನಿಂತು ಕಾರ್ಯ ಮಾಡುತ್ತಿದೆ.

ಒಟ್ಟಾರೆ ಫಲವೇನಾಯಿತು ಎನ್ನುವದನ್ನು ನಾವು ತಿಳಿಯೋಣ. ಮುಂದೊಂದು ದಿನ ಯಾರೋ ನಿರ್ದೇಶಕ ಅದನ್ನು ತಿಳಿದುಕೊಂಡು ಸಿನಿಮಾ ಮಾಡುತ್ತಾನೆ, ಆಗ ನೋಡಿ ಅನಂದಿಸೋಣ. ಹೊರತು ಯುದ್ಧದ ಮಾಹಿತಿಗಳ ಜೊತೆಯಲ್ಲಿ ಆಟವಾಡುವದು ಬೇಡ.

ಒಂದು ಸಣ್ಣ ಉದಾಹರಣೆ, ನಮ್ಮ ಯೋಧರೊಬ್ಬರು ಈಗ ಪಾಕೀಸ್ತಾನದಲ್ಲಿದ್ದಾರೆ. ನಿಮ್ಮ ಊರು ಯಾವುದು ಎಂದು ಪಾಕಿಗಳು ಅವರನ್ನು  ಕೇಳಿದರೆ ಹೇಳುವದಿಲ್ಲ ಎಂದು ಆ ಯೋಧ ಸ್ಪಷ್ಟವಾಗಿ ಹೇಳಿದರೆ, ನಮ್ಮ ಜನ ಅವರ ಊರು ಯಾವುದು, ಮನೆ ಎಲ್ಲಿದೆ, ಎಷ್ಟನೇ ಅಂತಸ್ತಿನಲ್ಲಿದೆ, ಮನೆಯಲ್ಲಿ ಯಾರ್ಯಾರು ಇದ್ದಾರೆ ಇವೆಲ್ಲವನ್ನೂ ಸಚಿತ್ರವಾಗಿ ವಿಡಿಯೋ ಮಾಡಿ ಹರಡುತ್ತಿದ್ದಾರೆ.

ಅರೆ, ಇಲ್ಲಿರುವ ಪಾಕಿ ಏಜೆಂಟುಗಳು, ಅವರ ಮನೆಯರವನ್ನು ಹಿಡಿದು, ಹಿಂಸೆ ಮಾಡಿ, ಅದರ ವಿಡಿಯೋ ಚಿತ್ರುಗಳನ್ನು ಅಲ್ಲಿ ಆ ವೀರಯೋಧನಿಗೆ ತೋರಿಸಿದರೆ ಅವರು ಮಾನಸಿಕವಾಗಿ ಕುಗ್ಗುವದಿಲ್ಲವೇ? ಅದರಿಂದೇನಾದರೂ ಅನಾಹುತವಾದರೆ?

ಆ ರೀತಿಯೇನಾದರೂ ಆದರೆ ಯಾರು ಅದಕ್ಕೆ ಹೊಣೆ?

ಹೀಗಾಗಿ ಈ ರೀತಿಯ ವಿಡಿಯೋ ನೋಡುವ ಮುನ್ನ, ಶೇರ್ ಮಾಡುವ ಮುನ್ನ ಸಾವಿರ ಬಾರಿ ಆಲೋಚಿಸಿ.

## ಯೋಧರಿಗೆ ಸಹಾಯ ಮಾಡುವ ಸರಿಯಾದ ಕ್ರಮ

ಇನ್ನು ಅನೇಕರಿಗೆ ಆ ವೀರಯೋಧರಿಗೆ ನೆರವಾಗುವ ಸಾತ್ವಿಕ ಮನಸ್ಸಿರುತ್ತದೆ. ನಮ್ಮೆಲ್ಲರ ಕರ್ತವ್ಯವೂ ಹೌದು. ಸಂಶಯವಿಲ್ಲ.

ಆದರೆ, ಸತ್ತು ಹೋದ ಸೈನಿಕರ ಮನೆಗೇ ಸಹಾಯ ಮಾಡಬೇಕು ಎಂಬ ನಿಯಮ ಬೇಡ. ಅವರಿಗೆ ಹೆಚ್ಚಿನ ನೆರವು ಅತ್ಯಂತ ಆವಶ್ಯಕ ನಿಜ. ಮಾಡಲೇಬೇಕು. ಅದರೆ ಅವರಿಗೆ ಮಾತ್ರ ಮಾಡಬೇಕು ಎಂಬ ನಿಯಮ ಬೇಡ.

**ಸೈನ್ಯ ಸೇರಿದ ಪ್ರತಿಯೊಬ್ಬ ವ್ಯಕ್ತಿಯ ಕುಟುಂಬಕ್ಕೂ ನಮ್ಮ ನೆರವು ಸಲ್ಲಬೇಕು. ಅವರ ಮನೆಯವರಿಗೆ ಗೌರವ ನೀಡಬೇಕು. ಅವರ ಮಕ್ಕಳು ಶಾಲೆಯಲ್ಲಿ ಎದೆಯುಬ್ಬಿಸಿ, ನಮ್ಮಪ್ಪ ಸೈನ್ಯದಲ್ಲಿದ್ದಾರೆ ಎಂದು ಹೇಳುವ ವಾತಾವರಣವನ್ನು ಸೃಷ್ಟಿಸಬೇಕು.**

ನಿಮ್ಮ ಊರಿನಲ್ಲಿಯೇ ಯಾರ ಕುಟುಂಬದ ಸದಸ್ಯರು ಸೈನ್ಯದಲ್ಲಿದ್ದಾರೆಯೋ ತಿಳಿದುಕೊಳ್ಳಿ.

ಅವರೊಂದಿಗೆ ನೇರ ಸಂಪರ್ಕವಿಟ್ಟುಕೊಳ್ಳಿ. ಅವರಿಗೆ ಏನು ಸಹಾಯ ಬೇಕೋ ಅದನ್ನು ನೇರವಾಗಿ ಮಾಡಿ.

ಇನ್ನೊಬ್ಬರ ಮುಖಾಂತರ ನೀಡುವದಕ್ಕಿಂತ ನಾವೇ ನೇರವಾಗಿ ನೀಡಿದಾಗ, ನಾವು ನೀಡಿದ ವಸ್ತು ಸರಿಯಾದ ವ್ಯಕ್ತಿಗಳಿಗೆ, ಸರಿಯಾದ ಕಾರ್ಯಕ್ಕೆ ತಲುಪಿದೆ ಎಂಬ ಭರವಸೆ ನಮಗಿರುತ್ತದೆ.

## ಸಣ್ಣಸಣ್ಣ ವಿಷಯಕ್ಕೆ ಹಿಗ್ಗಬೇಡಿ, ಕುಗ್ಗಲೂ ಬೇಡಿ.

ಯುದ್ಧ ಎನ್ನುವದು ಒಂದೇ ರೀತಿಯ ಪ್ರಕ್ರಿಯೆ ಅಲ್ಲ. ಯಾವಾಗಲೂ ನಮ್ಮ ಪಕ್ಷದವರದೇ ಮೇಲುಗೈ ಎಂದಾಗುವದಿಲ್ಲ.

ಅಂತಹ ರಾಮಚಂದ್ರನೇ ಯುದ್ಧಭೂಮಿ ಯಲ್ಲಿದ್ದಾಗಲೂ ಲಕ್ಷ್ಮಣ ಮೂರ್ಛೆ ತಪ್ಪಿ ಬಿದ್ದಿದ್ದ. ಕಪಿಗಳೂ ಎಚ್ಚರ ತಪ್ಪಿದ್ದರು. ರಾಮ ಅಳಲಿಲ್ಲ. ರಾಮ ಕುಗ್ಗಲಿಲ್ಲ. ಹನುಮನಿಂದ ಸಂಜೀವನ ತರಿಸಿ ಬದುಕಿಸಿದ. ಯುದ್ಧ ಮುಂದುವರೆಸಿದ. ರಾವಣನನ್ನು ಕೊಂದು ಹಾಕಿದ.

ಅಂತಹ ಪಾಂಡವರೇ ಯುದ್ಧ ಮಾಡುವಾಗಲೂ ಪಾಂಡವ ಪಕ್ಷದಲ್ಲಿಯೂ ಅಪಾರ ಹಾನಿಯುಂಟಾಯಿತು. ಅಭಿಮನ್ಯು, ಘಟೋತ್ಕಚ, ಪಾಂಡವರ ಮಕ್ಕಳೆಲ್ಲರೂ ಸತ್ತರು.

ಹಾಗಂತ ಅದು ಕುಗ್ಗುವ ಸಮಯವಲ್ಲ. ಹೋರಾಡುವ ಸಮಯ.

ಯುದ್ಧ ಒಂದೇ ರೀತಿ ಎಂದಿಗೂ ನಡೆಯುವದಿಲ್ಲ. ಎರಡೂ ಪಕ್ಷಗಳ ಬಲಾಬಲಗಳ ಘೋರ ಪರೀಕ್ಷೆ ಅದು.

ಹೀಗಾಗಿ ನಮ್ಮ ಪಾಳೆಯದಿಂದ ಒಂದು ಸಣ್ಣ ಗೆಲುವಾದರೂ ಸಂಭ್ರಮಿಸಿ, ಒಂದು ಸಣ್ಣ ತೊಂದರೆಯಾದರೂ ಆಕಾಶವೇ ಕಳಚಿ ಬಿದ್ದಂತಾಗುವದು ಬೇಡ. ಯಾರಿಗೆ ಗೊತ್ತು, ಸೋಲಿನ ಗಾಳ ಹಾಕಿ ಶತ್ರುವನ್ನು ಸದೆಬಡೆಯುವ ತಂತ್ರ ನಮ್ಮ ಯೋಧರದ್ದಾಗಿರಬಹುದು.

ಅಂತಿಮದಲ್ಲಿ ಗೆಲುವು ನಮ್ಮದೇ ಎನ್ನುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆ ದಿವಸ ಸಂಭ್ರಮಿಸೋಣ. 135 ಕೋಟಿ ಜನರೂ ಒಟ್ಟಿಗೇ

ವಂದೇ ಮಾತರಮ್ ಎಂದು ಕೂಗಿ ಕುಪ್ಪಳಿಸಿ ಸಂಭ್ರಮಿಸೋಣ.

ಹೆಂಡತಿ ಮಕ್ಕಳನ್ನು ಬಿಟ್ಟು, ವೃದ್ಧ ತಂದೆ ತಾಯಿಯರನ್ನು ಬಿಟ್ಟು, ಕಡೆಗೆ ಜೀವದ ಮೇಲೆ ಹಂಗನ್ನೂ ಬಿಟ್ಟು ನಮಗಾಗಿ, ನಮ್ಮ ಈ ನೆಲಕ್ಕಾಗಿ ಲಕ್ಷಾಂತರ ಯೋಧರು ಸಿದ್ಧರಾಗಿದ್ದಾರೆ.

ಅವರ ದೃಷ್ಟಿಯಿಂದ ಆಲೋಚಿಸೋಣ. ಅವರಿಗೆ ನೈತಿಕ ಧೈರ್ಯವಾಗಿ ನಿಲ್ಲೋಣ. ಅವರ ಕುಟುಂಬಕ್ಕೆ ಮಗನಾಗಿ ಮಗಳಾಗಿ ಬೆನ್ನೆಲುಬಾಗಿ ನಿಲ್ಲೋಣ.

**"ಯತೋ ಧರ್ಮಸ್ತತೋ ಜಯಃ"** ಎಲ್ಲಿ ಧರ್ಮವೋ ಅಲ್ಲಿಯೇ ವಿಜಯವಿರುತ್ತದೆ. ನಮ್ಮ ದೇಶ, ನಮ್ಮ ಸೈನ್ಯ ಎಂದಿಗೂ ತಪ್ಪು ಮಾಡಿಲ್ಲ, ಮಾಡುವದಿಲ್ಲ. ಹೀಗಾಗಿ ವಿಜಯ ನಮ್ಮದೇ. ಸಂಶಯವೇ ಇಲ್ಲ.  ಭಯವಂತೂ ಇಲ್ಲವೇ ಇಲ್ಲ.

**ವಂದೇ ಮಾತರಮ್**

— ವಿಷ್ಣುದಾಸ ನಾಗೇಂದ್ರಾಚಾರ್ಯ